ಉಪ ಅರಣ್ಯ ಸಂರಕ್ಷಣಾಧಿಕಾರಿ, ಮತ್ತು ನಿರ್ದೇಶಕರು,
ಕಾಳಿ ಹುಲಿ ಸಂರಕ್ಷಿತ ಪ್ರದೇಶ,ದಾಂಡೇಲಿ

ಕಛೇರಿ -08284-231585
ಫ್ಯಾಕ್ಸ -08284-232981
ಇ-ಮೇಲ directordatr@gmail.com
ದಾಂಡೇಲಿ-581325

ಸಂಖ್ಯೆ: ಬಿ4/ಭೂಮಿ/ರೈಲ್ವೆ ಡಬ್ಲಿಂಗ್/ಸಿಆರ್-8/2021-22 ದಿನಾಂಕ:30-04-2021

## ಅಧಿಕೃತ ಜ್ಞಾಪನಾ ಪತ್ರ

**ವಿಷಯ :** ರೈಲ್ವೆ ಡಬ್ಲಿಂಗ್ ಕಾಮಗಾರಿ ಸಲುವಾಗಿ ರೈಲ್ವೆ ಇಲಾಖೆ ಜಾಗೆಯಲ್ಲಿರುವ ಮರಗಳನ್ನು ಕಟಾವು ಮಾಡಿ ತಯಾರಿಸುವ ಜಲಾವು ಹಾಗೂ ನಾಟಾಗಳನ್ನು ಸಾಗಾಣಿಕೆ ಮಾಡಲು ಅನುಮತಿ ನೀಡುವ ಕುರಿತು.

**ಉಲ್ಲೇಖ:**
1) ಎಡಿಶನಲ್ ಜನರಲ್ ಮ್ಯಾನೇಜರ್/ಸಿವ್ಹಿಲ್ ರೈಲ ವಿಕಾಸ ನಿಗಮ ಲಿಮಿಟೆಡ ಬೆಳಗಾಂವ ರವರ ಕಛೇರಿ ಪತ್ರ ಸಂಖ್ಯೆ:RVNL/PIU/UBL/TGT-CLR-CRZ/W.Forest ದಿನಾಂಕ: 8-4-2021
2) ವಲಯ ಅರಣ್ಯಾಧಿಕಾರಿ, ವನ್ಯಜೀವಿ ವಲಯ, ಕ್ಯಾಸಲ್‌ರಾಕ ಇವರ ಕಚೇರಿ ಪತ್ರ ಸಂಖ್ಯೆ:9/10-04-2021
3) ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ವನ್ಯಜೀವಿ ಉಪ ವಿಭಾಗ, ಅಣಶಿ ಇವರ ಕಚೇರಿ ಪತ್ರ ಸಂಖ್ಯೆ:89/2020-21 ದಿನಾಂಕ:22-04-2021
4) GOI Letter No F.No 11-306/2014-FC Dated:15-01-2015 & F.No 11-306/2014-FC(pt) Dated:28-08-2015
5) ತಹಶೀಲ್ದಾರರು, ಜೋಯಿಡಾ ರವರ ಕಛೇರಿಯ ಪ್ರಮಾಣ ಪತ್ರದ ದಿ:5-8-2020
6) ಕರ್ನಾಟಕ ವೃಕ್ಷ ಸಂರಕ್ಷಣಾ ಕಾಯ್ದೆ 1976 ರ 8(3)(iii) (iv) ಮತ್ತು ಕರ್ನಾಟಕ ಅರಣ್ಯ ಅಧಿನಿಯಮ 1969 ರ ಸೆಕ್ಷನ್ 127(ಎ) ರಂತೆ

*****

**ಪ್ರಸ್ತಾವನೆ:**

ಕಾಳಿ ಹುಲಿ ಸಂರಕ್ಷಿತ ಪ್ರದೇಶದ ಕ್ಯಾಸಲ್‌ರಾಕ್ ವನ್ಯಜೀವಿ ವಲಯದ, ಕ್ಯಾಸಲ್‌ರಾಕ್ ದಿಂದ ಕುಲೇಮವರೆಗಿನ ಜೋಡಿ-ರೈಲು ಮಾರ್ಗದ ಕಾಮಗಾರಿಗೆ ಆತಂಕವಾಗಿರುವ ರೈಲ್ವೆ ಇಲಾಖಾ ಜಾಗದಲ್ಲಿರುವ ಮರಗಳನ್ನು ಕಟಾವಣೆ ಮಾಡಲು ಅನುಮತಿ ನೀಡಬೇಕೆಂದು ಉಲ್ಲೇಖಿತ ಪತ್ರ (1) ರಲ್ಲಿ ಎಡಿಶನಲ್ ಜನರಲ್ ಮ್ಯಾನೇಜರ್/ಸಿವ್ಹಿಲ್ ರೈಲ್ವೆ ನಿಗಮ ಬೆಳಗಾಂವ ರವರು ಈ ಕಚೇರಿಗೆ ವಿನಂತಿಸಿಕೊಂಡಿರುತ್ತಾರೆ. ಈ ಕುರಿತು ಉಲ್ಲೇಖ ಪತ್ರ (2) ರಲ್ಲಿ ವಲಯ ಅರಣ್ಯಾಧಿಕಾರಿ, ವನ್ಯಜೀವಿ ವಲಯ, ಕ್ಯಾಸಲ್‌ರಾಕ ರವರ ವರದಿ ಮತ್ತು ಉಲ್ಲೇಖ (3) ರಲ್ಲಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ವನ್ಯಜೀವಿ ಉಪ ವಿಭಾಗ, ಅಣಶಿ ಇವರು ನೀಡಿದ ಶಿಫಾರಸ್ಸಿನಂತೆ, ರೈಲ್ವೆ ಇಲಾಖೆಯವರು ಬ್ರಾಡಗೇಜ ಜೋಡಿ ರೈಲು ಮಾರ್ಗ ನಿರ್ಮಾಣ ಮಾಡುವ ಸಲುವಾಗಿ ಆತಂಕವಾಗಿರುವ ವಿವಿಧ ಜಾತಿಯ ಒಟ್ಟು 2097 ಸಂಖ್ಯೆ ಮರಗಳನ್ನು ಕಡಿಯಲು ಅನುಮತಿಗಾಗಿ ಮರಗಳ ಗುರುತು ಮಾಡಿದ ನಿಶಾನೆಯಾದಿ ಮತ್ತು ಮೌಲ್ಯ ಮಾಪನ ಪಟ್ಟಿಯನ್ನು ಪರಿಶೀಲಿಸಿದೆ. ಸದರಿ ಜೋಡಿ-ರೈಲು ಮಾರ್ಗದ ಕಾಮಗಾರಿಯ ಪ್ರಸ್ತಾವನೆಯು ಅರಣ್ಯ ಪ್ರದೇಶ ವಿಸ್ತೀರ್ಣ 9.57 ಹೇಕ್ಟರ್ ಹಾಗೂ ಮರಗಳಿಂದ ಕೂಡಿರುವ ರೈಲ್ವೆ ಮಾಲೀಕತ್ವದ ಪ್ರದೇಶ 9.06 ಹೇಕ್ಟರ್ ಒಳಗೊಂಡಿರುತ್ತದೆ. ಸದರಿ ಪ್ರಸ್ತಾವನೆಗೆ ಸಂಬಂಧಿಸಿದ ಅರಣ್ಯ ಪ್ರದೇಶವನ್ನು ಅರಣ್ಯೇತರ ಉದ್ದೇಶವಾದ ರೈಲ್ವೆ ಕಾಮಗಾರಿಗೆ ಉಪಯೋಗಿಸಿಕೊಳ್ಳಲು ಕೇಂದ್ರ ಸರ್ಕಾರದಿಂದ ಸ್ಟೇಜ್-1 ಅನುಮೋದನೆ (Stage-I approval) ಯನ್ನು ಉಪಯೋಗಿ ಸಂಸ್ಥೆಯವರು ಪಡೆದಿರುತ್ತಾರೆ. ಮುಂದುವರೆದು ಸದರಿ ಜೋಡಿ-ರೈಲು ಮಾರ್ಗದ ಕಾಮಗಾರಿಗೆ ಅನುಮೋದನೆ ಪಡೆದಿರುವ ಅರಣ್ಯ ಪ್ರದೇಶ ಹೊರತುಪಡಿಸಿ ರೈಲ್ವೆ ಇಲಾಖಾ ಮಾಲೀಕತ್ವದಲ್ಲಿ ಬರುವ ಕಲಂಬುಲಿ ಗ್ರಾಮದ ಸರ್ವೆ ನಂ 17 ಮತ್ತು 3/ಅ1/ಅ1/ಅ1 ರ ಕ್ಷೇತ್ರ 302 ಎಕರೆ 36 ಗುಂಟೆ, 08 ಆಣೆ ಪ್ರದೇಶದಲ್ಲಿಯ 2097 ಸಂಖ್ಯೆಯ ಆತಂಕವಾಗಿರುವ ಮರಗಳನ್ನು ಕಡಿಯಲು ಕರ್ನಾಟಕ ಅರಣ್ಯ ಸಂರಕ್ಷಣಾ ಕಾಯ್ದೆ 1976 ರಂತೆ ಅನುಮತಿ ನೀಡುವ ಕುರಿತು ಈ ಕೆಳಕಂಡಂತೆ ಆದೇಶ.

**ಆದೇಶ:**

ಪ್ರಸ್ತಾವನೆಯಲ್ಲಿ ವಿವರಿಸಿದಂತೆ ವಲಯ ಅರಣ್ಯಾಧಿಕಾರಿ, ವನ್ಯಜೀವಿ ವಲಯ, ಕ್ಯಾಸಲ್‌ರಾಕ ಮತ್ತು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ವನ್ಯಜೀವಿ ಉಪ ವಿಭಾಗ, ಅಣಶಿ ಇವರು ವರದಿಯಲ್ಲಿ ಶಿಫಾರಸ್ಸು ಮಾಡಿದನ್ವಯ ಕ್ಯಾಸಲ್‌ರಾಕ ದಿಂದ ಕುಲೇಮವರೆಗೆ ಬ್ರಾಡಗೇಜ ರೈಲ್ವೆ ಮಾರ್ಗ ನಿರ್ಮಾಣ ಕಾಮಗಾರಿಗೆ ಆತಂಕವಾಗಿರುವ ನಿಶಾನೆ ಮಾಡಿದ ಮರಗಳನ್ನು ಸಾರ್ವಜನಿಕ ಮತ್ತು ಆಡಳಿತಾತ್ಮಕ ದೃಷ್ಟಿಯಿಂದ ಕರ್ನಾಟಕ ವೃಕ್ಷ ಸಂರಕ್ಷಣಾ ಕಾಯ್ದೆ 1976 ರ 8(3)(iii) (iv) ರನ್ವಯ ಅವಶ್ಯಕತೆ ಇರುವ ಮರಗಳನ್ನು ಉಪಯೋಗಿ ಸಂಸ್ಥೆಯವರ ಸ್ವಂತ ಖರ್ಚಿನಲ್ಲಿ ವಿಲೇವಾರಿ ಮಾಡಲು ಹಾಗೂ ತಯಾರಿಸಿದ ಮಾಲ್ಗನ್ನು ಸರಕಾರಿ ಮರಮುಟ್ಟು ಕೋಠಿಗಳಗೆ ಸಾಗಾಣಿಕೆ ಮಾಡಲು ಷರತ್ತುಗಳಗೊಳ್ಳಪಟ್ಟು ಈ ಮೂಲಕ ಅನುಮತಿಸಿದೆ.

**ಮರಗಳ ಘೋಷವಾರೆ**

| ಕ್ರ.ಸಂ | ಕ್ಷೇತ್ರದ ವಿವರ | ಜಾತಿ | ಮರಗಳ ಸಂಖ್ಯೆ | ಅಂದಾಜು ಮಾಲ್ಗಿನ ವಿವರ | |
|---|---|---|---|---|---|
| | | | | ನಾಟಾ (ಘ.ಮೀ) | ಜಲಾವು (ಘ.ಮೀ) |
| 01 | ಕಲಂಬುಲಿ ಗ್ರಾಮದ ಚೈನೆಜ 21/900 ರಿಂದ 30/020 | ಮಿಶ್ರ ಜಾತಿ | 2097 | 84.509 | 390.711 |

ಮೇಲ್ಕಾಣಿಸಿದ ಮರಗಳ ನಿಶಾನೆಯ ವಿವರವಾದ ಯಾದಿ ಅನುಬಂಧ -1 ಹಾಗೂ 2 ಲಗತ್ತಿಸಿ ಈ ಕೆಳಗೆ ಕಾಣಿಸಿದ ಷರತ್ತುಗೊಳಪಟ್ಟು ಮಂಜೂರಾತಿ ನೀಡಲಾಗಿದೆ. ಈ ಆದೇಶವನ್ನು ಉಲ್ಲೇಖ(4) ರ ಭಾರತ ಸರ್ಕಾರದ ಮಾರ್ಗಸೂಚಿಗಳಂತೆ ಕರ್ನಾಟಕ ಅರಣ್ಯ ಇಲಾಖೆಯ ವೆಬ್ ಸೈಟ್ http://aranya.gov.in ನೇದರಲ್ಲಿ ಸಾರ್ವಜನಿಕರ ಮಾಹಿತಿಗಾಗಿ ಅಳವಡಿಸಿದೆ.

1) ಸದರಿ ಪ್ರಸ್ತಾಪಿತ ಪ್ರದೇಶವು ನಿರ್ವಹಣೀಕರಣ (Disforest) ಗೊಂಡಿದ್ದು ಸದರಿ ಭೂಮಿಯು ರೈಲ್ವೆ ಇಲಾಖೆಗೆ ಸೇರಿರುವ ಬಗ್ಗೆ ಹಾಗೂ ಸದರಿ ಪ್ರಸ್ತಾಪಿತ ಪ್ರದೇಶದಲ್ಲಿರುವ ಮರಗಳು ರೈಲ್ವೆ ಇಲಾಖೆಯ ಮಾಲೀಕತ್ವದಲ್ಲಿರುತ್ತವೆ ಎಂದು ತಹಶೀಲ್ದಾರ ಜೋಯಿಡಾ ರವರು ಉಲ್ಲೇಖ (5) ರ ಪ್ರಮಾಣ ಪತ್ರದಲ್ಲಿ ಸ್ಪಷ್ಟ ಪಡಿಸಿರುತ್ತಾರೆ. ಆದರೆ ಈ ಬಗ್ಗೆ ಯಾವುದೇ ಪುರಾವೆಯನ್ನು ಅಥವಾ ಜಿಲ್ಲಾಧಿಕಾರಿ/ ಕಂದಾಯ ಇಲಾಖೆಯಿಂದ ಪಡೆದ ನಿರಾಕ್ಷೇಪಣಾ ಪತ್ರವನ್ನು ಸಲ್ಲಿಸಿರುವುದಿಲ್ಲ. ಆದರೆ ಸದರಿ ಸಂಸ್ಥೆಯವರು ಕೋರಿಕೊಂಡಂತೆ ಸದರಿ ಕಾಮಗಾರಿಗಳನ್ನು ತುರ್ತಾಗಿ ಕೈಗೊಳ್ಳಬೇಕಾಗಿರುವುದರಿಂದ, ಕಂದಾಯ ಇಲಾಖೆಯ ಅಭಿಪ್ರಾಯದ ನಿಬಂಧನೆಗೆ ಒಳಪಟ್ಟು ಮರಗಳ ಕಟಾವಣೆಗೆ ಆದೇಶ ನೀಡಲಾಗಿದೆ. ಕಂದಾಯ ಇಲಾಖೆಯ ಖಚಿತ ಅಭಿಪ್ರಾಯ ನೀಡಿದ್ದಲ್ಲಿ ಈ ಕಚೇರಿಯಿಂದ ತಿದ್ದುಪಡೆ ಆದೇಶ ಹೊರಡಿಸಲಾಗುವುದು.

2) ಕರ್ನಾಟಕ ವೃಕ್ಷ ಸಂರಕ್ಷಣಾ ಕಾಯ್ದೆ 1976 ರ ಅಡಿಯಲ್ಲಿ ವೃಕ್ಷಾಧಿಕಾರಿಗೆ ನೀಡಿರುವ ದತ್ತ ಅಧಿಕಾರದ ಮೇರೆಗೆ ಭೂಮಿಯ ಮಾಲೀಕರಾದ ರೈಲ್ವೆ ಇಲಾಖೆಯವರು ಜೋಡಿ ರೈಲು ಕಾಮಗಾರಿಗೆ ಕಟಾವಣೆ ಮಾಡುವ ಪ್ರತಿ ಮರಕ್ಕೆ 10 ಸಸಿಗಳನ್ನು ಗುಣಮಟ್ಟಗಳಗುನಸಾರವಾಗಿರುವಂತೆ ನೆಡತಕ್ಕದ್ದು ಎಂದು ನಿರ್ದೇಶಿಸಿದೆ. ಅದರಂತೆ, ರೈಲ್ವೆ ಇಲಾಖೆಯವರು ಜೋಡಿ ರೈಲು ಕಾಮಗಾರಿಗೆ ಕಟಾವಣೆ ಮಾಡುವ 2097 ರ ಮರಗಳ ಬದಲಾಗಿ 6 ರಿಂದ 8 ಅಡಿ ಎತ್ತರವಿರುವ 14X20 ಅಳತೆಯ 20970 ಸಂಖ್ಯೆಯ ಸ್ಥಳಯ ಪರಿಸರಕ್ಕೆ ಹೊಂದುವ ಸಸಿಗಳನ್ನು ನೆಟ್ಟು 5 ವರ್ಷಗಳವರೆಗೆ ಪೋಷಣೆ ಮಾಡುವ ಷರತ್ತಿಗೆ ಒಳಪಟ್ಟು ಕಟಾವನೆ ಮಾಡಲು ಆದೇಶ ನೀಡಲಾಗಿದೆ.

3) ಜೋಡಿ ರೈಲು ಕಾಮಗಾರಿಗೆ ಕಟಾವಣೆ ಮಾಡುವ 2097 ಮರಗಳ ಬದಲಾಗಿ 20,970 ಸಸಿಗಳನ್ನು ನೆಟ್ಟು 5 ವರ್ಷಗಳ ಪೋಷಣೆ ಮಾಡಿರುವ ಬಗ್ಗೆ ಖಚಿತಪಡಿಸಿಕೊಳ್ಳಲು ಪ್ರತಿ ಗಿಡಕ್ಕೆ ರೂ. 200.00 ರಂತೆ ಒಟ್ಟು ಮೊತ್ತ ರೂ. 41,94,000.00ಯನ್ನು ಭದ್ರತಾ ಠೇವಣಿಯನ್ನಾಗಿ ಈ ಕೆಳ ಸಹಿದಾರರ ಹೆಸರಿನಲ್ಲಿ ಇಡುವುದು. ಹಾಗೂ ಕಟಾವಣೆ ಮಾಡಿದ ಪ್ರತಿ ಒಂದು ಮರಕ್ಕೆ 10 ಗಿಡಗಳನ್ನು ನೆಟ್ಟು ಪೋಷಿಸಿದ ಬಗ್ಗೆ ವಲಯ ಅರಣ್ಯಾಧಿಕಾರಿ, ವನ್ಯಜೀವಿ ವಲಯ, ಕ್ಯಾಸಲ್‌ರಾಕ್ ರವರಿಂದ ಅನುಪಾಲನಾ ವರದಿ ದೃಢೀಕರಿಸಿ ಸಲ್ಲಿಸಿದಲ್ಲಿ ಸದರಿ ಠೇವಣಿಯನ್ನು ರೈಲ್ವೆ ನಿಗಮದವರಿಗೆ ಹಿಂತಿರುಗಿಸಲಾಗುವುದು.

4) ಸದರಿ ರೈಲ್ವೆ ಲೈನನಲ್ಲಿಯ ಮರಗಳನ್ನು ಉಪಯೋಗಿ ಸಂಸ್ಥೆಯವರು ಸ್ವಂತ ಖರ್ಚಿನಲ್ಲಿ ಕಟಾವು ಮಾಡಬೇಕಾಗಿದ್ದು ಕಟಾವು ಮಾಡಿದ ನಂತರ ತಯಾರಿಸಿದ ಜಲಾವನ್ನು ಸರಕಾರ ಮರಮುಟ್ಟು ಕೋಠಿ ಜಗಲಬೇಟಗೆ ಮತ್ತು ನಾಟಾಗಳನ್ನು ಸರಕಾರಿ ಮರಮುಟ್ಟು ಕೋಠಿ ದಾಂಡೇಲಿಗೆ ಸಾಗಾಟ ಮಾಡಲು ಸಂಬಂಧಪಟ್ಟ ವಲಯ

ಅರಣ್ಯಾಧಿಕಾರಿಗಳ ಮತ್ತು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಮುಖಾಂತರ ಈ ಕಚೇರಿಗೆ ವರದಿ ಸಲ್ಲಿಸಿ ರಫ್ತಿ ಆದೇಶ ಹಾಗೂ ರಹದಾರಿ ಪಾಸಗಳನ್ನು ಪಡೆದನಂತರದ ರಫ್ತಿ ಪಡಿಸುವುದು.

5) ಸದರಿ ರೈಲ್ವೆ ಲೈನನಲ್ಲಿಯ ಮರಗಳನ್ನು ಕಟಾವು ಮಾಡುವಾಗ ಯಾವುದೇ ಆಸ್ತಿ ಹಾನಿ ಮತ್ತು ವನ್ಯಪ್ರಾಣಿಗಳಿಗೆ ತೊಂದರೆಯಾಗದಂತೆ ಎಚ್ಚರಿಕೆ ವಹಿಸುವುದು. ಒಂದು ವೇಳೆ ಯಾವುದೇ ಹಾನಿ ಆದಲ್ಲಿ ಅದಕ್ಕೆ ರೈಲ್ವೆ ಪ್ರಾಧಿಕಾರವೇ ಜವಾಬ್ದಾರರು.

6) ಸದರಿ ಕಾಮಗಾರಿಗೆ ಸಂಬಂಧಪಟ್ಟಂತೆ ಭವಿಷ್ಯದಲ್ಲಿ ಯಾವುದೇ ವ್ಯತ್ಯಾಸದ ಹಣ ಭರಣ ಮಾಡಬೇಕಾದಲ್ಲಿ ರೈಲ್ವೆ ಪ್ರಾಧಿಕಾರದವರು ಭರಣ ಮಾಡುವುದು.

7) ಅನುಮತಿ ನೀಡಿರುವ ಮರಗಳ ಹೊರತಾಗಿ ಹೆಚ್ಚುವರಿ ಅಥವಾ ಬೇರೆ ಮರಗಳನ್ನು ಕಡಿದಲ್ಲಿ ಅರಣ್ಯ ಕಾಯ್ದೆ 1963 ರ ಕಾನೂನಿನಂತೆ ಕ್ರಮಕೈಗೊಳ್ಳಲಾಗುವುದು.

8) ಸದರಿ ಕ್ಷೇತ್ರದಲ್ಲಿನ ಮರಗಳನ್ನು ಕಟಾವಣೆ ಮಾಡುವ ಪೂರ್ವದಲ್ಲಿ ಬೌಂಡ್ರಿಯನ್ನು ಜಿ.ಪಿ.ಎಸ್. ರಿಡಿಂಗ್‌ನಿಂದ ಗುರುತಿಸಿಕೊಂಡು ಕಾಮಗಾರಿಗಳನ್ನು ಕೈಗೊಳ್ಳುವುದು. ಮರಗಳ ಕಟಾವಣೆ ಕಾಮಗಾರಿಗಳ ಕುರಿತಂತೆ ಕರ್ನಾಟಕ ಅರಣ್ಯ ಸಂಹಿತೆ ಹಾಗೂ ಕರ್ನಾಟಕ ಅರಣ್ಯ ಲೆಕ್ಕ ಸಂಹಿತ ಪ್ರಕಾರ ಎಲ್ಲಾ ವಹಿಗಳನ್ನು ತಪ್ಪದೇ ನಿರ್ವಹಿಸುವುದು.

9) ತಯಾರಿಸಿದ ಅರಣ್ಯ ಉತ್ಪನ್ನವನ್ನು ರಹದಾರಿ ಪರಮೀಟನೊಂದಿಗೆ ಸಮೀಪದ ಸರಕಾರಿ ಮರಮುಟ್ಟು ಕೋಠಿಗಳಿಗೆ ಸಾಗಾಣಿಕೆ ಮಾಡಿ ಲಾಟವಾರು ಕಟ್ಟಿ ಹಚ್ಚಿಡುವುದು.

10) ಕಟಾವು ಮಾಡಿದ ಮರಗಳಿಂದ ತಯಾರಿಸಿದ ಅರಣ್ಯ ಉತ್ಪನ್ನವನ್ನು ಮರಮುಟ್ಟು ಕೋಠಿಗಳಿಗೆ ಸಾಗಾಣಿಕೆ ಮಾಡುವರೆಗಿನ ಅವಧಿಯವರೆಗೂ ಪ್ರತಿ ದಿನದ ವರದಿಯ ಪ್ರಗತಿಯನ್ನು ನಿಗದಿ ಪಡಿಸಿದ ನಮೂನೆಯಲ್ಲಿ ವಾರಕ್ಕೊಮ್ಮೆ ತಪ್ಪದೇ ವಲಯ ಅರಣ್ಯಾಧಿಕಾರಿ, ವನ್ಯಜೀವಿ ವಲಯ, ಕ್ಯಾಸಲ್‌ರಾಕ ಮತ್ತು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ವನ್ಯಜೀವಿ ಉಪ ವಿಭಾಗ, ಅಣಶಿ ಇವರ ಮುಖಾಂತರ ಸಲ್ಲಿಸುವುದು.

ವೃಕ್ಷಾಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ
ಕಾಳಿ ಹುಲಿ ಸಂರಕ್ಷಿತ ಪ್ರದೇಶ, ದಾಂಡೇಲಿ.

ಪ್ರತಿಯನ್ನು ವಲಯ ಅರಣ್ಯಾಧಿಕಾರಿ, ವನ್ಯಜೀವಿ ವಲಯ, ಕ್ಯಾಸಲ್‌ರಾಕ್ ಇವರಿಗೆ ಮಾಹಿತಿಗಾಗಿ ಹಾಗೂ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.

**ಪ್ರತಿಯನ್ನು**

ಮಾನ್ಯ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, (ವನ್ಯಜೀವಿ), ಬೆಂಗಳೂರು ರವರಿಗೆ ಮಾಹಿತಿಗಾಗಿ ಗೌರವಪೂರ್ವಕವಾಗಿ ಸಲ್ಲಿಸಿದೆ

ಮಾನ್ಯ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, (ಅರಣ್ಯ ಸಂರಕ್ಷಣೆ) ಬೆಂಗಳೂರು ರವರಿಗೆ ಮಾಹಿತಿಗಾಗಿ ಗೌರವಪೂರ್ವಕವಾಗಿ ಸಲ್ಲಿಸಿದೆ

ಮಾನ್ಯ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ಕೆನರಾ ವೃತ್ತ, ಶಿರಸಿ ರವರಿಗೆ ಮಾಹಿತಿಗಾಗಿ ಗೌರವಪೂರ್ವಕವಾಗಿ ಸಲ್ಲಿಸಿದೆ

ಎಡಿಶನಲ್ ಜನರಲ್ ಮ್ಯಾನೇಜರ್/ಸಿವ್ಹಿಲ್ ರೈಲ ವಿಕಾಸ ನಿಗಮ ಲಿಮಿಟೆಡ ಬೆಳಗಾಂವ ರವರಿಗೆ ಮಾಹಿತಿಗಾಗಿ ಕಳುಹಿಸಿದೆ

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ವನ್ಯಜೀವಿ ಉಪ ವಿಭಾಗ, ಅಣಶಿ ಇವರಿಗೆ ಮಾಹಿತಿಗಾಗಿ ಮತ್ತು ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.